ನಿಮಿಷದ ಮುಳ್ಳು ಆರರ ಮೇಲೆ ಬರುವ ತನಕ ನಾನು ಕೂತೇ ಇದ್ದೆ. ನಮ್ಮ ಆಫೀಸಿನ ಕೆಲವರು ಅದಕ್ಕೂ ಮೊದಲು ಲಿಫ್ಟಿನತ್ತ ಧಾವಿಸಿದ್ದರು. ಅವರಿಗೆ ಹೋಗುವ ತರಾತುರಿಯಿತ್ತು. ನನಗೂ ಮನೆಗೆ ಬೇಗ ಹೋಗುವ ಉತ್ಸಾಹವಿರುವುದಿಲ್ಲವೆಂದೇನೂ ಇಲ್ಲ. ಐದೂವರೆಗೆ ಆಫೀಸ್ ಬಿಡುವುದರಿಂದ ನಾನು ಅದಕ್ಕೂ ಮೊದಲು ಕೂತ ಸ್ಥಳದಿಂದ ಕದಲುವುದಿಲ್ಲ. ನಾನು ಹತ್ತು ನಿಮಿಷ ಮೊದಲು ಅಥವಾ ಅನಂತರ ಹೋದರೂ ಆಫೀಸೇನೂ ಬದಲಾಗುವುದಿಲ್ಲ. ಒಂದು ದಿನ ಹೋಗದಿದ್ದರೂ ಆಫೀಸಿನ ಕೆಲಸಗಳು ಯಥಾವತ್ ನಡೆಯುತ್ತವೆ. ಆದರೆ ಆಫೀಸಿನ ನಿಯಮಗಳನ್ನು ಉಲ್ಲಂಘಿಸಬಾರದೆಂದು ನನಗನ್ನಿಸುತ್ತದೆ. ನನ್ನಿಂದಾಗುವಷ್ಟು ದಿನ ನಾನು ನಿಯಮಗಳನ್ನು ಪಾಲಿಸುತ್ತ ಬಂದಿದ್ದೇನೆ. ಆದ್ದರಿಂದ ಆಫೀಸಿನ ಜನ ನನ್ನ ಬಗ್ಗೆ ಗೇಲಿ ಮಾಡಿದರೂ, ಕೊಂಕು ಮಾತನಾಡಿದರೂ ನನಗೆ ಬೇಸರವೆನಿಸುವುದಿಲ್ಲ. ಆದರೆ ಅವರಿಗಾದರೂ ನನ್ನತ್ತ ಗಮನವೆಲ್ಲಿದೆ? ನನ್ನ ಬಗ್ಗೆ ಯಾರಿಗೂ ಕಾಳಜಿಯಿಲ್ಲ. ಪ್ರತಿಯೊಬ್ಬ ತನ್ನಲ್ಲಿ ತಾನೇ ಹೂತಿರುತ್ತಾನೆ.

ನನ್ನ ಬಗ್ಗೆ ಯಾರಿಗೂ ಕಾಳಜಿಯಿಲ್ಲವೆಂದರೆ ರೇವತಿಗೆ ಅನ್ಯಾಯ ಮಾಡಿದಂತಾಗುತ್ತದೆ. ನಾನು ಮನೆಗೆ ಹಿಂತಿರುಗುವ ದಾರಿ ಕಾಯುತ್ತ ಕಣ್ಣಲ್ಲಿ ಎಣ್ಣೆಹಾಕಿಕೊಂಡು ನೋಡುತ್ತಿರುತ್ತಾಳೆ. 'ಮನೆಗೆ ಬರಲು ತಡಮಾಡಬೇಡಿ' ಎಂದು ಅವಳು ಎಷ್ಟು ಬಾರಿ ಹೇಳಿಲ್ಲ? ಆದರೆ ಒಮ್ಮೊಮ್ಮೆ ಆಫೀಸಿನ ಕೆಲಸದಲ್ಲಿ ಮುಳುಗಿದ್ದಾಗ, ಸಮಯಕ್ಕೆ ಸರಿಯಾಗಿ ಬಸ್ ಸಿಗದಿದ್ದಾಗ, ದಾರಿಯಲ್ಲಿ ಯಾರಾದರೂ ಪರಿಚಿತರು ಭೇಟಿಯಾದಾಗ ಮನೆ ಮುಟ್ಟಲು ತಡವಾಗುತ್ತಿತ್ತು. ರೇವತಿ ಚಿಂತೆ ಮಾಡುತ್ತ ಕೂತಿರುತ್ತಿದ್ದಳು. ಅವಳು ಯೋಚಿಸುತ್ತಿರಬಹುದು ಪ್ರಕಾಶನಿಗೆ ಇಂದೇಕೆ ತಡವಾಗಿದೆಯಂತ. ಅವರಿಗೆ ಬಸ್ಸು ತಪ್ಪಿತೆ? ಆಫೀಸಿನಲ್ಲಿ ಕೆಲಸ ಹೆಚ್ಚಾಗಿದೆಯೆ ಅಥವಾ ಆರೋಗ್ಯವೇನಾದರೂ ಕೈಕೊಟ್ಟಿತೊ ಎಂದು ಯೋಚಿಸುತ್ತಿರಬಹುದು.

ಇವತ್ತೂ ರೇವತಿ ನನ್ನ ದಾರಿ ಕಾಯುತ್ತಿರಬಹುದು. ಮನೆಯಿಂದ ಹೊರಡುವಾಗ ಅವಳು ಹೇಳಿದಳು 'ಬರುವಾಗ ಹೂಮಾಲೆ ತನ್ನಿ' ಅಂತ. ಈ ಹೊತ್ತು ಹೂಮಾಲೆ ಒಯ್ಯಲೇಬೇಕು. ಸಹಸಾ ಅವಳು ತನಗೆ ಅದು ಬೇಕು ಇದು ಬೇಕು ಎಂದು ಹೇಳುತ್ತಿರುವುದಿಲ್ಲ. ಜಾಜಿ ಅರಳುವ ದಿನಗಳಲ್ಲಿ ಮುಡಿಯಲು ಹೂ ತರಲು ಎಂದಾದರೊಮ್ಮೆ ಜ್ಞಾಪಿಸುತ್ತಾಳೆ. ಅನಂತರ ನಾನು ಪ್ರತಿದಿನವೂ ಜಾಜಿಯ ಮಾಲೆ ತೆಗೆದುಕೊಂಡು ಹೋಗುತ್ತಿದ್ದರೆ 'ನಿಮಗೆ ಹೇಳೋದೆ ತಪ್ಪು. ಒಂದು ದಿನ ತನ್ನಿ ಅಂದರೆ ಪ್ರತಿದಿನ ತರೋದೆ. ಯಾಕಾದರೂ ತರ್ತೀರಿ. ಹೂವೇನು ಸೋವಿಯೇ?... ಮುತ್ತೈದೆ ಹೆಂಗಸರು ಹೂ ಮುಡಿಯಬೇಕಂತಾರೆ ಅದ್ಕೆ ಒಂದು ದಿನ ತರೋಕ್ಕೆ ಹೇಳಿದ್ದೆ. ಇನ್ನು ಮುಂದೆ ತರ್‌ಬೇಡಿ' ಎಂದು ಗದರಿಸುತ್ತಾಳೆ. ನಾನು ಮಾತನಾಡುವುದಿಲ್ಲ. ನಕ್ಕು ಸುಮ್ಮನಾಗುತ್ತೇನೆ. ಯಾಕೆಂದರೆ ಆ ಗದರುವಿಕೆಯಲ್ಲೂ ಪ್ರೀತಿ ಅಡಕವಾಗಿರುತ್ತದೆ.

ರೇವತಿ ನಿಜಕ್ಕೂ ಇತರ ಹೆಂಗಸರಂತಲ್ಲ. ಗಂಡನಿಗೆ ಸುಖಿಸಿಗಬೇಕು, ಅವನು ಲವಲವಿಕೆಯಿಂದಿರಬೇಕು ಎಂದು ಚಡಪಡಿಸುತ್ತಾಳೆ. ತನಗಾಗಿ ಅವಳು ಏನನ್ನೂ ಬೇಡುವುದಿಲ್ಲ. ಬೆಲೆಯೇರಿಕೆಯಾಗಿದೆಯೆಂದು ಕೊರಗುವುದಿಲ್ಲ. ತನ್ನ ಗಂಡ ಸಂತುಷ್ಟನಾಗಿದ್ದರೆ ಸಾಕು ಎಂದು ಮನಸಾರೆ ಬಯಸುತ್ತಾಳೆ. ಗಂಡನ ಮುಖದಲ್ಲಿ ದುಗುಡ ಕಂಡರೆ ಗಾಬರಿಯಾಗುತ್ತಾಳೆ... ಇಂಥ ಹೆಂಡತಿ ಪಡೆಯಬೇಕಾದರೂ ಅದೃಷ್ಟ ಬೇಕು.